ಬಾಕಿ ವಸೂಲಾತಿಯ ಬಗ್ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತೀವ್ರವಾಗಿ ಪರಿಗಣಿಸಿ ಬಾಕಿ ವಸೂಲಿಗಾಗಿ ಮಂಡಳಿಯ ಪ್ರತಿಯೊಂದು ವಿಭಾಗಕ್ಕೆ ಮಾಹೆಯಾನದ ಗುರಿಯನ್ನು ನಿಗದಿಪಡಿಸಲಾಗಿದೆ. ಗುರಿ ಸಾಧಿಸಲು ಕೆ.ಇ.ಬಿ. ಎಲ್ಲ ಪ್ರಯತ್ನ ಮಾಡುತ್ತಿದೆ.

ಕಾಗ್ನಿಸಬಲ್ ಮತ್ತು ನಾನ್ ಕಾಗ್ನಿಸಬಲ್ ಪ್ರಕರಣಗಳಲ್ಲಿ ನೀಡಲಾಗುವ ಹಿಂಬಾಕಿ ಬಿಲ್ಲುಗಳ ಬಗ್ಗೆ ಕೆಲವು ಗ್ರಾಹಕರುಗಳು ಮೇಲ್ಮನವಿ ಸಲ್ಲಿಸಿದ್ದು, ಇವುಗಳನ್ನು ತ್ವರಿತ ಗತಿಯಲ್ಲಿ ವಿಲೇವಾರಿ ಮಾಡಲು ಮಂಡಳಿಯು ಅಪಲೇಟ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮತ್ತು ಕೆಲವು ಗ್ರಾಹಕರುಗಳು ಬಾಕಿ ಹಣದ ಬಗ್ಗೆ ವಿವಾದವನ್ನು ನ್ಯಾಯಾಲಯಗಳಿಗೆ ಕೊಂಡೊಯ್ದಿದ್ದು, ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಬಾಕಿಯಿರುವ ವಿದ್ಯುತ್ ಗ್ರಾಹಕರುಗಳಿಗೆ ವಿದ್ಯುತ್ ಸಂಪರ್ಕ ಬಂದ್ ಮಾಡುವ ಕಾರ್ಯವನ್ನು ಎಲ್ಲಾ ಹಂತಗಳಲ್ಲಿ ಪರಿಶೀಲಿಸಲಾಗುತ್ತಿದೆ. ವಿದ್ಯುತ್ ಬಾಕಿಯನ್ನು ಭೂಕಂದಾಯ (ಲ್ಯಾಂಡ್ ರೆವಿನ್ಯೂ) ವೆಂದು ಪರಿಗಣಿಸಿ ಬಾಕಿ ವಸೂಲಾತಿಗಾಗಿ ಕ.ವಿ.ಮಂ. (ರೆಕವರಿ ಆಫ್ ಡ್ಯೂಸ್) ರೂಲ್ಸ್ 1978ರ ಪ್ರಕಾರ 'ಎ', ಬಿ ಮತ್ತು 'ಸಿ' ಫಾರಂಗಗಳನ್ನು ನೀಡಿ ಬಾಕಿ ವಸೂಲಾತಿಗಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಮೈಸೂರಿನಲ್ಲಿ ಹೊಸದಾಗಿ ಪಶುವೈದ್ಯಶಾಲೆ ತೆರೆಯುವುದು

311 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನಲ್ಲಿ ಎಷ್ಟು ಪಶುವೈದ್ಯ ಆಸ್ಪತ್ರೆಗಳಿವೆ, ಅವು ಎಲ್ಲೆಲ್ಲಿ?

ಆ) ಮೈಸೂರಿನ ಕುಂಬಾರಕೊಪ್ಪಲು, ಒಂಟಿಕೊಪ್ಪಲು ಹಾಗೂ ತೊಣಚಿಕೊಪ್ಪಲಿಗೆ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡಬೇಕೆಂದು ಸಾರ್ವಜನಿಕರು ಕೋರಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಒಟ್ಟು 11

ಎಲ್ಲಿವರೆ ಕೆಳಕಂಡಂತಿವೆ

ಪಶು ಆಸ್ಪತ್ರೆ		ಪ್ರಾಥಮಿಕ ಚಿಕಿತ್ಸಾಲಯ		ಪಶು ಚಿಕಿತ್ಸಾ ಕೇಂದ್ರ	
1)	ನಗರ ಪಶು ಆಸ್ಪತ್ರೆ ಧನ್ವಂತ್ರಿರಸ್ತೆ	1)	ಇಂಡಸ್ಟ್ರಿಯಲ್ ಸಬರ್ಬ್	1)	ಇಟ್ಟಿಗೆಗೂಡು
		2)	ಕೆ.ಎ.ಆರ್.ಪಿ.	2)	ಪಡುವಾರ ಹಳ್ಳಿ
3)	ರಾಜೇಂದ್ರನಗರ			3)	ಬೋಗಾದಿ
4)	ಕನ್ನೇಗೌಡನ-ಕೊಪ್ಪಲು			4)	ಹಿನಕಲ್
5)	ಕುಂಬಾರಕೊಪ್ಪಲು				

ಅ)

1) ಕುಂಬಾರಕೊಪ್ಪಲಿನಲ್ಲಿ ಈಗಾಗಲೇ ಒಂದು ಪಶು ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದೆ.

2) ತೊಣಚಿಕೊಪ್ಪಲಿನಲ್ಲಿ ಪಶುವೈದ್ಯ ಸಂಸ್ಥೆ ಪ್ರಾರಂಭಿಸಲು ಕೋರಿಕೆ ಬಂದಿದ್ದು, ಇದನ್ನು 1996-97ನೇ ಸಾಲಿನಲ್ಲಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು

3) ಒಂಟಿಕೊಪ್ಪಲಿನಲ್ಲಿ ಪಶುವೈದ್ಯ ಸಂಸ್ಥೆಯನ್ನು ಪ್ರಾರಂಭಿಸಲು ಯಾವ ಕೋರಿಕೆಯೂ ಬಂದಿರುವುದಿಲ್ಲ, ಕೋರಿಕೆ ಬಂದಲ್ಲಿ ಇದನ್ನು ಸಹ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಮೈಸೂರು ನಗರದ ಲೋಕೋಪಯೋಗಿ ಇಲಾಖೆಯ ಕಟ್ಟಡಗಳ ಬಗ್ಗೆ

313 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಕಟ್ಟಡಗಳು ಯಾವುವು?*

ಆ) *ಈ ಕಟ್ಟಡಗಳ ದುರಸ್ಥಿ ಕಾರ್ಯ ಹಾಗೂ ಸುಣ್ಣ ಬಣ್ಣ ಬಳಿಯುವ ಕಾಮಗಾರಿಗಳು ಸಕಾಲಕ್ಕೆ ನಡೆಸಲಾಗುತ್ತಿದೆಯೇ, ಹಾಗಿಲ್ಲದಿದ್ದಲ್ಲಿ ಕಾರಣಗಳೇನು?*

ಇ) *ಈ ಕಟ್ಟಡಗಳಿಗೆ ದುರಸ್ಥಿಕಾರ್ಯ ಹಾಗೂ ಸುಣ್ಣ ಬಳಿಯುವ ಕಾರ್ಯಕ್ಕೆ ಸರ್ಕಾರ ಈ ವರ್ಷದಲ್ಲಿ ಎಷ್ಟು ಹಣ ಕಾಯ್ದಿರಿಸಿದೆ, ಎಷ್ಟು ಹಣ ಖರ್ಚಾಗಿದೆ.*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿಗಳು) :

ಅ)

ಸರ್ಕಾರ ವಸತಿಗೃಹಗಳು	75
ಸರ್ಕಾರದ ಕಛೇರಿ ಕಟ್ಟಡಗಳು	125
ಒಟ್ಟು	200

ಆ) ಅನುದಾನದ ಲಭ್ಯತೆಗೆ ಅನುಗುಣವಾಗಿ ಆಸ್ಪತ್ರೆ ಕಟ್ಟಡಗಳಿಗೆ ಹೊರತಾಗಿ ಬೇರೆ ಕಟ್ಟಡಗಳಿಗೆ ಸುಣ್ಣ ಬಣ್ಣಗಳನ್ನು ಯೋಜನೇತರ ವೆಚ್ಚದಲ್ಲಿ ಅನುದಾನದ ಕಡಿತವಿರುವುದರಿಂದ ಮಾಡುತ್ತಿಲ್ಲ.

ಇ) ಸರ್ಕಾರದ ಕಛೇರಿ ಕಟ್ಟಡಗಳಿಗೆ 31.50 ಲಕ್ಷ ರೂ.ಗಳು ಮತ್ತು ಸರ್ಕಾರದ ವಸತಿಗೃಹಗಳಿಗೆ 5.00 ಲಕ್ಷ ರೂ.ಗಳು ಒದಗಿಸಿದ್ದು ಅದರ ಪೈಕಿ ಜನವರಿ 96ರವರೆಗೆ 13.69 ಲಕ್ಷ ರೂ.ಗಳು ಮತ್ತು 1.37 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಕದ್ರಾ ಜಲ ವಿದ್ಯುತ್ ಯೋಜನೆ

508 - ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲಾ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕದ್ರಾ ಜಲವಿದ್ಯುತ್ ಯೋಜನೆಗೆ ಕುವೈತ್ ದೇಶ ಏನಾದರೂ ಆರ್ಥಿಕ ನೆರವು ನೀಡುವುದಾಗಿ ಹೇಳಿದೆಯೇ?*

ಆ) *ಹಾಗಿದ್ದರೆ ಎಷ್ಟು ನೆರವನ್ನು ನೀಡುವುದಾಗಿ ಹೇಳಿದೆ, ಯಾವಾಗ ನೀಡುವುದು?*

ಇ) *ಇದುವರೆಗೆ ಎಷ್ಟಾದರೂ ಹಣವನ್ನು ಬಿಡುಗಡೆ ಮಾಡಲಾಗಿದೆಯೇ?*

ಈ) *ಕಲ್ಕತ್ತಾ ಮುಂಬೈ ನಗರಗಳ ಮಾದರಿಯಲ್ಲಿ ಬೆಂಗಳೂರು ನಗರದಲ್ಲೂ ವಿದ್ಯುತ್ ವಿತರಣೆಯನ್ನು ಬೆಂಗಳೂರು ನಗರದಲ್ಲೂ ವಿದ್ಯುತ್ ವಿತರಣೆಯನ್ನು*